ಅಲ್ಲಿ ಬೋರ್‌ವೆಲ್‌ನ್ನು ತೋಡಿದರೂ ಸಹ ಅಲ್ಲಿ ನೀರು ಬರುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಕೆಲಸವನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು. ಈಗ ಸರ್ಕಾರದವರು ಡಿಸಿಯವರಿಗೆ ಈ ಕೆಲಸದ ಬಗ್ಗೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ತುರ್ತಾಗಿ ಬೋರ್‌ವೆಲ್‌ನ್ನು ಹಾಕುವುದಕ್ಕೆ ಈ ಹಣವು ಸಾಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ 23 ವಾರ್ಡ್‌ಗಳು ಇದೆ. ವಾರ್ಡ್‌ಗೆ ಒಂದು ಬೋರ್‌ವೆಲ್ ಹಾಕಿದರೂ ಸಹ ಸಾಕಾಗುವುದಿಲ್ಲ. ನಮ್ಮ ಕಾರ್ಪೋರೇಷನ್‌ನಲ್ಲಿ ದೊಡ್ಡ ದೊಡ್ಡ ವಾರ್ಡ್‌ಗಳು ಸಹ ಬರುತ್ತದೆ. ಇವತ್ತಿನ ದಿವಸ ಒಂದೊಂದು ವಾರ್ಡ್‌ಗೆ ಕನಿಷ್ಠ 3 ಬೋರ್‌ವೆಲ್‌ಗಳನ್ನು ಹಾಕಬೇಕಾದಂತಹ ಪರಿಸ್ಥಿತಿ ಇದೆ; ಅದಕ್ಕಾಗಿ ಸರ್ಕಾರ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಈ ಕೆಲಸಕ್ಕಾಗಿ ತಾವು 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪೈಪ್‌ಲೈನ್ ಕೆಲಸವನ್ನು ಯುದ್ಧೋಪಾದಿಯಲ್ಲಿ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳುತ್ತಿದ್ದೇನೆ, ಇದಕ್ಕೆ ಸರಿಯಾದಂತಹ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕಾಗುತ್ತದೆ.

ಶ್ರೀ ಹೆಚ್. ಜಿ. ಹಯಾತ್‌ಖಾನ್ : ಮಾನ್ಯ ಅಧ್ಯಕ್ಷರೆ, 35 ಕೋಟಿ ರೂಪಾಯಿಗಳಲ್ಲಿ ಸರ್ಕಾರವು ಬಿಡುಗಡೆ ಮಾಡಿರುವ ಹಣ ಕೇವಲ 7 $^{1}/_{2}$ ಕೋಟಿ ರೂಪಾಯಿಗಳು ಮಾತ್ರ. ನಾನು 3 ತಿಂಗಳಿನಿಂದ ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದರೂ ಸಹ, ಅವರು ಇವತ್ತು, ನಾಳೆ ಎಂದು ಹೇಳಿಕೊಂಡು ಹೋದರು ಈ ಬೇಸಿಗೆಯ ಕಾಲದಲ್ಲಿ ಜನರು ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ; ಜನರು ಊರನ್ನು ಬಿಡುವುದಕ್ಕೆ ತಯಾರಿ ನಡೆಸಿದ್ದಾರೆ. ಈ 35 ಕೋಟಿ ರೂಪಾಯಿಗಳಲ್ಲಿ ಸರ್ಕಾರ ಕೊಟ್ಟಿರುವುದು ಕೇವಲ 7 $^{1}/_{2}$ ಕೋಟಿ ರೂಪಾಯಿಗಳು, 20 ಪರ್ಸೆಂಟ್ ಹಣವನ್ನು ತಡ ಮಾಡಿದರೆ ಮುಂದಿನ ಗತಿ ಏನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಎಲ್ಲಾ ಮಾನ್ಯ ಸದಸ್ಯರುಗಳು ಆಗ್ರಹ ಪೂರ್ವಕವಾಗಿ ಅದಷ್ಟು ಶೀಘ್ರವಾಗಿ ಈ ಕೆಲಸವಾಗಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮುಂದಿನ ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ ಅದಕ್ಕೆ ಮಂಜೂರಾತಿಯನ್ನು ಮಾಡುತ್ತೇವೆ.

ಒಂದೇ ಕಡೆ ಕಾರ್ಯ ನಿರ್ವಹಿಸುವ ಅಧಿಕಾರಿಗಳ ವರ್ಗಾವಣೆ

265 (2445) : ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ್) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದಲ್ಲಿರುವ ರೇಷ್ಮೆ ಇಲಾಖೆಯ ವಿವಿಧ ಕಛೇರಿಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸುಮಾರು 5 ರಿಂದ 10 ಮತ್ತು 10 ರಿಂದ 20 ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು? (ವರ್ಗವಾರು, ಹುದ್ದೆವಾರು, ಹೆಸರು ವಿವರ ಒದಗಿಸುವುದು)

(ಆ) ಕೆಲವೊಂದು ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿದ್ದಾಗ್ಯೂ ಅನ್ಯ ಕರ್ತವ್ಯದ ಮೇಲೆ ಪುನಃ ಬೆಂಗಳೂರು ನಗರದಲ್ಲಿರುವ ಕಛೇರಿಗಳಿಗೆ ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಇ) ಹಾಗಿದ್ದಲ್ಲಿ ಅಂತಹ ಅಧಿಕಾರಿಗಳಿಂದ ಸರ್ಕಾರಕ್ಕೆ ಯಾವ ರೀತಿ ಲಾಭ ಉಂಟಾಗಿದೆ, ಇದಕ್ಕೆ ಅವಕಾಶ ಮಾಡಿಕೊಟ್ಟ ಆಯುಕ್ತರ ಹಾಗೂ ಹೆಚ್ಚುವರಿ ನಿರ್ದೇಶಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಬೆಂಗಳೂರು ನಗರದಲ್ಲಿರುವ ರೇಷ್ಮೆ ಇಲಾಖೆಯ ವಿವಿಧ ಕಛೇರಿಗಳಲ್ಲಿ 105 ಅಧಿಕಾರಿ: ಸಿಬ್ಬಂದಿ ವರ್ಗದವರು 5 ರಿಂದ 10 ವರ್ಷದವರೆಗೆ ಮತ್ತು 67 ಅಧಿಕಾರಿ : ಸಿಬ್ಬಂದಿ ವರ್ಗದವರು 10 ರಿಂದ 20 ವರ್ಷಗಳವರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಲಗತ್ತಿಸಿರುವ ಅನುಬಂಧದಲ್ಲಿ ವಿವರಗಳನ್ನು ನೀಡಿದೆ.

(ಆ) ರೇಷ್ಮೆ ಇಲಾಖೆಯ ಅಭಿವೃದ್ಧಿ ಕಾರ್ಯಗಳ ಯಶಸ್ವಿ ಅನುಷ್ಠಾನ, ಸುಗಮ ಕಾರ್ಯನಿರ್ವಹಣೆ ಹಾಗೂ ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಅವಶ್ಯವಿರುವ ಪ್ರಮಾಣದಲ್ಲಿ ಮಾತ್ರ ಅನ್ಯಕಾರ್ಯ ವ್ಯವಸ್ಥೆಯನ್ನು ಮಾಡಲಾಗಿದೆ.

(ಇ) ರೇಷ್ಮೆ ಇಲಾಖೆಯ ಸುಗಮ ಕಾರ್ಯನಿರ್ವಹಣೆ ಹಾಗೂ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರ ಅನ್ಯಕಾರ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಈ ವ್ಯವಸ್ಥೆಯನ್ನು ಲಾಭನಷ್ಟದ ದೃಷ್ಟಿಯಲ್ಲಿ ಪರಿಗಣಿಸಲು ಬರುವುದಿಲ್ಲ.

ಬೆಂಗಳೂರು ನಗರದಲ್ಲಿ 5 ವರ್ಷದಿಂದ 10 ವರ್ಷಗಳ ವರೆಗೆ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು : ನೌಕರರ ವಿವರಗಳು

ಕಿರಿಯ ಅಭಿಯಂತರರು:-

1.	ಆರ್. ರಾಮಲಿಂಗಯ್ಯ	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು

ರೇಷ್ಮೆ ಜಂಟಿ ನಿರ್ದೇಶಕರು:-

2.	ಕನ್ಯಾಡಿ. ಎನ್.ಎಂ	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು

ರೇಷ್ಮೆ ಸಹಾಯಕ ನಿರ್ದೇಶಕರು:-

3.	ಬಿ. ಎನ್. ಸುಬ್ರಮಣ್ಯ	ಕೇಂದ್ರ ಕಛೇರಿ, ಬೆಂಗಳೂರು.
4.	ಗೀತ. ಪಿ. ಗದಗಿಮಠ	ಕೇಂದ್ರ ಕಛೇರಿ, ಬೆಂಗಳೂರು.
5.	ಮೋರ್‌ಷಫಿಉರ್ ರೆಹಮಾನ್	ಕೇಂದ್ರ ಕಛೇರಿ, ಬೆಂಗಳೂರು.
6.	ಮುಕ್ತಾಬಾಯಿ. ವಿ.	ಕೇಂದ್ರ ಕಛೇರಿ, ಬೆಂಗಳೂರು.
7.	ಸುಮನ್ ಸಿಂಗ್. ಆರ್.ಎಲ್	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ರೇಷ್ಮೆ ವಿಸ್ತರಣ ಅಧಿಕಾರಿಗಳು:-

8. ಅಶೋಕ ರೆಡ್ಡಿ. ಕೆ.	ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು
9. ಕುಮುದವಲ್ಲಿ. ಹೆಚ್. ಎನ್.	ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು
10. ಉಮಾಮಹೇಶ್ವರಿ	ಕೇಂದ್ರ ಕಛೇರಿ, ಬೆಂಗಳೂರು.
11. ಶ್ಯಾಮಲಾದೇವಿ. ಎನ್	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ಅಧೀಕ್ಷಕರು:-

12. ನಾಗರತ್ನ. ಹೆಚ್. ಎಸ್.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು
13. ಮೊಹಮ್ಮದ್ ಆತುಲ್ಲಾ	ಕೇಂದ್ರ ಕಛೇರಿ, ಬೆಂಗಳೂರು.
14. ರಾಮೇಗೌಡ. ವಿ.	ಕೇಂದ್ರ ಕಛೇರಿ, ಬೆಂಗಳೂರು.
15. ಚಂದ್ರಶೇಖರ್. ಬಿ.ಸಿ	ಕೇಂದ್ರ ಕಛೇರಿ, ಬೆಂಗಳೂರು.
16. ರಾಮನಾಥನ್. ಎಸ್.ಎಂ.	ಕೇಂದ್ರ ಕಛೇರಿ, ಬೆಂಗಳೂರು.
17. ವೆಂಕಟೇಶ್. ಎಂ.ಎನ್.	ಕೇಂದ್ರ ಕಛೇರಿ, ಬೆಂಗಳೂರು.
18. ರಾಜಶೇಖರ್. ಕೆ.ಸಿ.	ಕೇಂದ್ರ ಕಛೇರಿ, ಬೆಂಗಳೂರು.
19. ಶಾರದ. ಆರ್	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು
20. ಚನ್ನಬಸಯ್ಯ. ಪಿ.ಎಂ.	ಕೇಂದ್ರ ಕಛೇರಿ, ಬೆಂಗಳೂರು.
21. ಮಿಂಗ್ಲ್ ಲೋಬೊ. ಕೆ.	ಕೇಂದ್ರ ಕಛೇರಿ, ಬೆಂಗಳೂರು.
22. ಬೂದಿಹಾಳ್. ಜಿ.ಬಿ.	ತನಿಖಾ ದಳ, ಬೆಂಗಳೂರು.

ಹಿರಿಯ ರೇಷ್ಮೆ ನಿರೀಕ್ಷಕರು:-

23. ಗುಲ್ನಾಜ್ ಬೇಗಂ	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
24. ಶಿವರುದ್ರಯ್ಯ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ರೇಷ್ಮೆ ನಿರೀಕ್ಷಕರು:-

25. ಅಲ್ಲಾ ಬಕಷ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
26. ಸೈಯದ್ ಅರಿಫುಲ್ಲಾ	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
27. ರಾಮಚಂದ್ರ. ಸಿ	ಕೇಂದ್ರ ಕಛೇರಿ, ಬೆಂಗಳೂರು.
28. ಪೂಂಗುಡಿ. ಎಸ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
29. ಸಿದ್ದರಾಜು. ಎನ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
30. ಅಬ್ದುಲಿ ಸುಭಾಸ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ಪ್ರಥಮ ದರ್ಜೆ ಸಹಾಯಕರು:-

31. ಸೈಯದ್ ಅಬ್ದುಲ್ ಸುಭಾಸ್	ಕೇಂದ್ರ ಕಛೇರಿ, ಬೆಂಗಳೂರು.
32. ಸತ್ಯನಾರಾಯಣ.	ಕೇಂದ್ರ ಕಛೇರಿ, ಬೆಂಗಳೂರು.
33. ಪಧ್ಮನಾಭ	ಕೇಂದ್ರ ಕಛೇರಿ, ಬೆಂಗಳೂರು.
34. ಆನಂದ್. ಬಿ. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
35. ವಿಜಯ. ಎನ್.ವಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
36. ಇಂದಿರ. ಎಂ.ಎಸ್.	ಕೇಂದ್ರ ಕಛೇರಿ, ಬೆಂಗಳೂರು.
37. ಕಮಲಾ ಬಾಯಿ. ಐ.ಎಸ್	ಕೇಂದ್ರ ಕಛೇರಿ, ಬೆಂಗಳೂರು.
38. ಗಣೇಶ್ ಕುಮಾರ್. ಬಿ	ಕೇಂದ್ರ ಕಛೇರಿ, ಬೆಂಗಳೂರು.
39. ಉಷಾ. ಕೆ. ಎಸ್.	ಕೇಂದ್ರ ಕಛೇರಿ, ಬೆಂಗಳೂರು.
40. ಶ್ರೀನಿವಾಸ ಮೂರ್ತಿ. ಕೆ.	ಕೇಂದ್ರ ಕಛೇರಿ, ಬೆಂಗಳೂರು.
41. ಕಾರಿಯಪ್ಪ ಎನ್.ಮೊರಬಾದ್	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು
42. ಮಂಗಳ ಗೌರಮ್ಮ ಹಿರೇಮಠ	ಕೇಂದ್ರ ಕಛೇರಿ, ಬೆಂಗಳೂರು.
43. ಬೆನ್ನೂರು. ಟಿ. ಎ.	ಕೇಂದ್ರ ಕಛೇರಿ, ಬೆಂಗಳೂರು.
44. ವಿಜೇಂದ್ರರಾವ್. ಎಸ್.	ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.

45. ಜಯಪ್ರಕಾಶ್. ಕೆ.	ಕೇಂದ್ರ ಕಛೇರಿ, ಬೆಂಗಳೂರು.
46. ಸುಂದರೇಶ್. ಕೆ.ಎಸ್.	ಕೇಂದ್ರ ಕಛೇರಿ, ಬೆಂಗಳೂರು.
47. ಕನಕಮ್ಮ. ಎಂ.	ಕೇಂದ್ರ ಕಛೇರಿ, ಬೆಂಗಳೂರು.

ಶೀಘ್ರಲಿಪಿಗಾರರು:-

48. ಮಂಜುಳಾದೇವಿ. ಪಿ.	ಕೇಂದ್ರ ಕಛೇರಿ, ಬೆಂಗಳೂರು.
49. ಮಹದೇವ. ಎಂ.ಎ	ಕೇಂದ್ರ ಕಛೇರಿ, ಬೆಂಗಳೂರು.
50. ನಾಗರಾಜ್. ಡಿ.	ಕೇಂದ್ರ ಕಛೇರಿ, ಬೆಂಗಳೂರು.
51. ಆದಿರತ್ನಮ್ಮ. ಎ.	ಕೇಂದ್ರ ಕಛೇರಿ, ಬೆಂಗಳೂರು.
52. ರಮೇಶ್ ಕುಮಾರ್. ಎ.ಎಲ್.	ಕೇಂದ್ರ ಕಛೇರಿ, ಬೆಂಗಳೂರು.
53. ಮಹಂತೇಶ್. ಎಂ.	ಕೇಂದ್ರ ಕಛೇರಿ, ಬೆಂಗಳೂರು.
54. ಸಂಜಯ. ವೈ. ಜಗತಾಪ್	ಕೇಂದ್ರ ಕಛೇರಿ, ಬೆಂಗಳೂರು.

ರೇಷ್ಮೆ ಪ್ರದರ್ಶಕರು:-

55. ರಾಜಣ್ಣ. ಎಂ. ಡಿ	ಕೇಂದ್ರ ಕಛೇರಿ, ಬೆಂಗಳೂರು.
56. ಕುಮಾರ ಸ್ವಾಮಿ. ವೈ.ಎನ್.	ಕೇಂದ್ರ ಕಛೇರಿ, ಬೆಂಗಳೂರು.
57. ವೆಂಕಟೇಶ್. ಜಿ.	ಜಿಲ್ಲಾ ಪಂಚಾಯತ್‌ರವರ ಕಚೇರಿ, ಬೆಂಗಳೂರು.

ದ್ವಿತೀಯ ದರ್ಜೆ ಸಹಾಯಕರು:-

58. ಅನಸೂಯ.	ಕೇಂದ್ರ ಕಛೇರಿ, ಬೆಂಗಳೂರು.
59. ಶಚಿದೇವಿ. ಸಿ.	ಕೇಂದ್ರ ಕಛೇರಿ, ಬೆಂಗಳೂರು.
60. ಪಂಕಜ. ಎನ್.	ಕೇಂದ್ರ ಕಛೇರಿ, ಬೆಂಗಳೂರು.
61. ಮಾತೇವ್ಸ್. ಎಂ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
62. ಭಾಗ್ಯ. ಜಿ.	ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್ ವಿಭಾಗ, ಬೆಂಗಳೂರು)
63. ಗಂಗರಾಜಯ್ಯ	ಜಿಲ್ಲಾ ಪಂಚಾಯತ್‌ರವರ ಕಚೇರಿ, ಬೆಂಗಳೂರು.
64. ಸುವರ್ಣ. ಜಿ.ಎಂ.	ಕೇಂದ್ರ ಕಛೇರಿ, ಬೆಂಗಳೂರು.
65. ಸೋಮಶೇಖರ್. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

66. ವೆಂಕಟೇಶ್. ಬಿ.ಟಿ.	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು
67. ಸುರೇಶ್. ಹೆಚ್.	ಕೇಂದ್ರ ಕಛೇರಿ, ಬೆಂಗಳೂರು.

ರೇಷ್ಮೆ ಪ್ರವರ್ತಕರು:-

68. ಮಂಜುಳ. ಬಿ.ಎಸ್.	ಕೇಂದ್ರ ಕಛೇರಿ, ಬೆಂಗಳೂರು.
69. ವಿಮಲ. ಎ.	ಕೇಂದ್ರ ಕಛೇರಿ, ಬೆಂಗಳೂರು.
70. ಕಲ್ಪನ. ಬಿ.ಆರ್.	ಕೇಂದ್ರ ಕಛೇರಿ, ಬೆಂಗಳೂರು.
71. ಶಂಕರ್. ಬಿ.ಕೆ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
72. ಮಧು ಬಾಬು. ಎನ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
73. ಗುಲ್ನಾಜ್ ಸುಲ್ತಾನ್.	ಕೇಂದ್ರ ಕಛೇರಿ, ಬೆಂಗಳೂರು.

ಬೆರಳಚ್ಚುಗಾರರು:-

74. ಜಯಂತಿ ಮಾವಪ್ಪ	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
75. ಪುಟ್ಟಲಕ್ಷ್ಮಮ್ಮ	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು
76. ವಿಜಯಕುಮಾರಿ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು
77. ಸಿದ್ದಮ್ಮ. ಎಸ್.ಕೆ.	ಕೇಂದ್ರ ಕಛೇರಿ, ಬೆಂಗಳೂರು.
78. ಗುಹಪ್ರಿಯ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
79. ಪುಷ್ಪವಲ್ಲಿ. ಎ.ಎಸ್.	ಕೇಂದ್ರ ಕಛೇರಿ, ಬೆಂಗಳೂರು.

ವಾಹನ ಚಾಲಕರು:-

80. ಮುನಿವೆಂಕಟಪ್ಪ	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
81. ಶ್ರೀನಿವಾಸ. ಹೆಚ್.ಡಿ	ಜಿಲ್ಲಾ ಪಂಚಾಯತ್‌ರವರ ಕಚೇರಿ, ಬೆಂಗಳೂರು.
82. ರಾಮಚಂದ್ರ. ಎಂ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
83. ಲಕ್ಕಯ್ಯ.	ಕೇಂದ್ರ ಕಛೇರಿ, ಬೆಂಗಳೂರು.
84. ಮುನಿಯಪ್ಪ.	ಕೇಂದ್ರ ಕಛೇರಿ, ಬೆಂಗಳೂರು.
85. ರಾಜಶೇಖರ. ವಿ.	ಕೇಂದ್ರ ಕಛೇರಿ, ಬೆಂಗಳೂರು.

86. ರಾಬರ್ಟ್ ಪೆರೆರ	ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.
87. ರಮೇಶ್. ಕೆ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.

ಅಟೆಂಡರ್:-

88. ಕೋದಂಡರಾಜು.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ಜವಾನರು:-

89. ಪದ್ಮಬಾಯಿ	ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್ ವಿಭಾಗ, ಬೆಂಗಳೂರು
90. ಅರುಣ	ಕೇಂದ್ರ ಕಛೇರಿ, ಬೆಂಗಳೂರು.
91. ಕೃಷ್ಣ. ಬಿ.	ಕೇಂದ್ರ ಕಛೇರಿ, ಬೆಂಗಳೂರು.
92. ಬಸವರಾಜಪ್ಪ. ಎಸ್.	ತನಿಖಾದಳ, ಬೆಂಗಳೂರು
93. ಮುನಿಸ್ವಾಮಿ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
94. ಯಲ್ಲಪ್ಪ. ಹೆಚ್. ಎಂ.	ಕೇಂದ್ರ ಕಛೇರಿ, ಬೆಂಗಳೂರು.
95. ತಿಮ್ಮಪ್ಪ.	ಕೇಂದ್ರ ಕಛೇರಿ, ಬೆಂಗಳೂರು.
96. ಜಯರಾಮಯ್ಯ. ಜಿ.ವಿ.	ಕೇಂದ್ರ ಕಛೇರಿ, ಬೆಂಗಳೂರು.
97. ರಂಗೇಗೌಡ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
98. ಗೋಪಾಲ್. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
99. ಪರಮೇಶ್ವರ. ಜಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
100. ಭಾಗ್ಯಮ್ಮ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
101. ಚೆನ್ನಮ್ಮ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
102. ಶಿವಶಂಕರ್.	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.
103. ಕೆಂಪಮ್ಮ. ಎಸ್. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
104. ಅನಸೂಯಮ್ಮ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು
105. ನಿಂಗಮ್ಮ	ಕೇಂದ್ರ ಕಛೇರಿ, ಬೆಂಗಳೂರು

ಬೆಂಗಳೂರು ನಗರದಲ್ಲಿ 10 ರಿಂದ 20 ವರ್ಷಗಳವರೆಗೆ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು : ನೌಕರರ ವಿವರಗಳು

ರೇಷ್ಮೆ ಅಧೀಕ್ಷಕರು:-

1. ಮಧುಕರ್. ಕೆ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
2. ವನಮಾಲ. ಸಿ.	ಕೇಂದ್ರ ಕಛೇರಿ, ಬೆಂಗಳೂರು.
3. ಸುದರ್ಶನ್. ವಿ.	ಕೇಂದ್ರ ಕಛೇರಿ, ಬೆಂಗಳೂರು.
4. ಸತ್ಯವತಿ. ಕೆ. ಆರ್.	ಕೇಂದ್ರ ಕಛೇರಿ, ಬೆಂಗಳೂರು.
5. ಮಹಮದ್ ಫಯಾಜ್.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು
6. ಮಂಜುಳಾ ದೇವಿ. ಹೆಚ್.ಬಿ.	ಕೇಂದ್ರ ಕಛೇರಿ, ಬೆಂಗಳೂರು.

ರೇಷ್ಮೆ ನಿರೀಕ್ಷಕರು:-

7. ನಾಗರಾಜರಾವ್. ಹೆಚ್.ಎನ್.	ಕೇಂದ್ರ ಕಛೇರಿ, ಬೆಂಗಳೂರು.

ಪ್ರಥಮ ದರ್ಜೆ ಸಹಾಯಕರು:-

8. ಲಲಿತಾ. ಜಿ.ಎಸ್.	ಕೇಂದ್ರ ಕಛೇರಿ, ಬೆಂಗಳೂರು.
9. ರಾಮಕ್ರಿಷ್ಣ ರೆಡ್ಡಿ.	ಕೇಂದ್ರ ಕಛೇರಿ, ಬೆಂಗಳೂರು.
10. ಲೀಲಾ, ಎ. ಕಡೂರ್.	ಕೇಂದ್ರ ಕಛೇರಿ, ಬೆಂಗಳೂರು.
11. ಶಂಕರಪ್ಪ. ಬಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
12. ಸಿದ್ದಯ್ಯ. ಕೆ.	ಕೇಂದ್ರ ಕಛೇರಿ, ಬೆಂಗಳೂರು.
13. ಲೋಕೇಶಪ್ಪ. ಜಿ. ಎಸ್	ಕೇಂದ್ರ ಕಛೇರಿ, ಬೆಂಗಳೂರು.
14. ಸುರೇಶ್. ಎಸ್.	ಕೇಂದ್ರ ಕಛೇರಿ, ಬೆಂಗಳೂರು.
15. ಕಂಬಾಲಿ ಮಠ್.	ತನಿಖಾ ಧಳ, ಬೆಂಗಳೂರು.
16. ರಾಜಲಕ್ಷ್ಮಿ. ಹೆಚ್.ಆರ್	ಕೇಂದ್ರ ಕಛೇರಿ, ಬೆಂಗಳೂರು.
17. ಬಸಪ್ಪ. ಜಿ.ಹೆಚ್	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
18. ಸಾವಿತ್ರಮ್ಮ. ಜೆ.	ಕೇಂದ್ರ ಕಛೇರಿ, ಬೆಂಗಳೂರು.
19. ಗೋಪಾಲ್ ರಾವ್. ಎನ್.	ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.

ಶೀಘ್ರಲಿಪಿಗಾರರು:-

20. ಚಂದ್ರ ಶೇಖರ ಬಾಬು.	ಕೇಂದ್ರ ಕಛೇರಿ, ಬೆಂಗಳೂರು.
21. ಶೈಲಜಾ. ಕೆ. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
22. ಕನಕರತ್ನ. ಬಿ. ಎಸ್.	ಕೇಂದ್ರ ಕಛೇರಿ, ಬೆಂಗಳೂರು.
23. ಲೀಲಾವತಿ	ಜಿಲ್ಲಾ ಪಂಚಾಯತ್‌ರವರ ಕಛೇರಿ, ಬೆಂಗಳೂರು.
24. ಚಂದ್ರಪ್ಪ. ಎಂ.	ಕಾರ್ಯಪಾಲಕ ಅಭಿಯಂತರವರ ಕಛೇರಿ, ಬೆಂಗಳೂರು.

ದ್ವೀತಿಯ ದರ್ಜೆ ಸಹಾಯಕರು:-

25. ನರಸಿಂಹ ಮೂರ್ತಿ. ಆರ್.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
26. ಕೃಷ್ಣ. ಸಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
27. ಗೌರಿ. ಬಿ. ವಿ.	ಕೇಂದ್ರ ಕಛೇರಿ, ಬೆಂಗಳೂರು.

ಬೆರಳಚ್ಚುಗಾರರು:-

28. ಪುಷ್ಪ. ಎನ್. ರಾವ್.	ಕೇಂದ್ರ ಕಛೇರಿ, ಬೆಂಗಳೂರು.
29. ಅಂಬಾದೇವಿ.ಜೆ.ಶಾಂತಾರಾಮ್	ಕೇಂದ್ರ ಕಛೇರಿ, ಬೆಂಗಳೂರು.
30. ಅನೂರಾಧ. ಹೆಚ್. ಎನ್.	ಕೇಂದ್ರ ಕಛೇರಿ, ಬೆಂಗಳೂರು.
31. ಜಯಮ್ಮ. ಟಿ.	ಕೇಂದ್ರ ಕಛೇರಿ, ಬೆಂಗಳೂರು.
32. ಸುರೇಶ ಬಾಬು.	ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.
33. ಲೀಲಾವತಿ. ಹೆಚ್. ಎಲ್.	ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು.
34. ಸುಧಾ. ವಿ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
35. ನಾಗರತ್ನಮ್ಮ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
36. ಪುಷ್ಪವತಿ. ಸಿ.ಎಂ.	ಕೇಂದ್ರ ಕಛೇರಿ, ಬೆಂಗಳೂರು.
37. ಸಿದ್ದಗಂಗಮ್ಮ. ಪಿ. ಎಸ್.	ಕೇಂದ್ರ ಕಛೇರಿ, ಬೆಂಗಳೂರು.

ವಾಹನ ಚಾಲಕರು:-

38. ಕೃಷ್ಣ. ಸಿ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
39. ಉಮೇಶ್. ಟಿ.ಸಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
40. ಪುಟ್ಟಸ್ವಾಮಿ. ಸಿ.ಎಲ್.	ಕೇಂದ್ರ ಕಛೇರಿ, ಬೆಂಗಳೂರು.
41. ಚಿಕ್ಕಲಿಂಗಯ್ಯ. ಬಿ.ಈ.	ಕೇಂದ್ರ ಕಛೇರಿ, ಬೆಂಗಳೂರು.
42. ದೊಡ್ಡವೀರಯ್ಯ. ವಿ.	ಕೇಂದ್ರ ಕಛೇರಿ, ಬೆಂಗಳೂರು.
43. ಶ್ರೀನಿವಾಸನ್.	ಕೇಂದ್ರ ಕಛೇರಿ, ಬೆಂಗಳೂರು.
44. ವೆಂಕಟೇಶ್. ಆರ್.	ತನಿಖಾ ಧಳ, ಬೆಂಗಳೂರು.
45. ರಹೀಮುಲ್ಲಾ ಶಾನ್.	ಕೇಂದ್ರ ಕಛೇರಿ, ಬೆಂಗಳೂರು.

ಅಟೆಂಡರ್:-

46. ನಾಗರಾಜ. ಎಂ.	ಕೇಂದ್ರ ಕಛೇರಿ, ಬೆಂಗಳೂರು.
47. ಆನಂದ್. ಕೆ.	ಕೇಂದ್ರ ಕಛೇರಿ, ಬೆಂಗಳೂರು.

ಮೆಕಾನಿಕ್ -2:-

48. ಮಾರಪ್ಪ.	ಕೇಂದ್ರ ಕಛೇರಿ, ಬೆಂಗಳೂರು.

ಜವಾನರು:-

49. ಮುನಿಯಪ್ಪ. ಎನ್.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
50. ಪೂಜಗಯ್ಯ	ಕೇಂದ್ರ ಕಛೇರಿ, ಬೆಂಗಳೂರು.
51. ಗೋವಿಂದರಾಜು. ಎ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
52. ವೆಂಕಟೇಶ್. ಆರ್.	ಜಿಲ್ಲಾ ಪಂಚಾಯತ್‌ರವರ ಕಛೇರಿ, ಬೆಂಗಳೂರು.
53. ನಾಗರಾಜು.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
54. ಪದ್ಮನಾಭ. ಎನ್.	ಕೇಂದ್ರ ಕಛೇರಿ, ಬೆಂಗಳೂರು.
55. ಈಶ್ವರಪ್ಪ. ಕೆ.ಸಿ.	ಕೇಂದ್ರ ಕಛೇರಿ, ಬೆಂಗಳೂರು.
56. ನಂಜಪ್ಪ. ಎಸ್.	ತಾಂತ್ರಿಕ ಸೇವಾ ಕೇಂದ್ರ, ಅತ್ತಿಬೆಲೆ.
57. ಭತ್ಯಲಿಂಗಪ್ಪ.	ಕೇಂದ್ರ ಕಛೇರಿ, ಬೆಂಗಳೂರು.
58. ಶಕುಂತಲ.	ಕೇಂದ್ರ ಕಛೇರಿ, ಬೆಂಗಳೂರು.

59. ರಾಮು. ಬಿ.ಆರ್.	ಜಿಲ್ಲಾ ಪಂಚಾಯತ್‌ರವರ ಕಛೇರಿ, ಬೆಂಗಳೂರು.
60. ಪುಟ್ಟಯ್ಯ.	ರೇಷ್ಮೆ ಗೂಡಿನ ಮಾರುಕಟ್ಟೆ, ಬೆಂಗಳೂರು
61. ಶಾಂತ ಕುಮಾರಿ.	ಕೇಂದ್ರ ಕಛೇರಿ, ಬೆಂಗಳೂರು.
62. ಪ್ರಭಾಕರ್. ಸಿ.	ಕಾಯ್ದೆ ಕಾನೂನು ಜಾರಿ ವಿಭಾಗ, ಬೆಂಗಳೂರು.
63. ನಾಗಯ್ಯ. ಸಿ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.
64. ಬಸವೇಗೌಡ. ಕೆ. ಹೆಚ್.	ಕೇಂದ್ರ ಕಛೇರಿ, ಬೆಂಗಳೂರು.
65. ಚಂದ್ರರಾವ್.	ಕೇಂದ್ರ ಕಛೇರಿ, ಬೆಂಗಳೂರು.
66. ಶ್ರೀನಾಥ್. ಆರ್. ಎಸ್.	ಕೇಂದ್ರ ಕಛೇರಿ, ಬೆಂಗಳೂರು.
67. ಅಂಥೋನಿ ನಾಥನ್. ಎ.	ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಮೊದಲು ಅವರು ಈ ಉತ್ತರವನ್ನು ನೋಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ನೋಡಿದ್ದರೆ, ಈ ರೀತಿಯ ಉತ್ತರವನ್ನು ಅವರಿಂದ ನಾನು ನಿರೀಕ್ಷೆ ಮಾಡುತ್ತಿರಲಿಲ್ಲ. ನಾನು ಕೇಳಿದ ಪ್ರಶ್ನೆ ಏನೆಂದರೆ, ಸುಮಾರು 5 ರಿಂದ 10 ವರ್ಷಗಳವರೆಗೆ, ಮತ್ತು 10 ರಿಂದ 20 ವರ್ಷಗಳವರೆಗೆ ನಿಮ್ಮ ರೇಷ್ಮೆ ಇಲಾಖೆಯಲ್ಲಿ ಎಷ್ಟು ಜನ ಅಧಿಕಾರಿಗಳು ಒಂದೇ ಜಾಗದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ? ಅದಕ್ಕೆ ಮಾನ್ಯ ಮಂತ್ರಿಗಳು ಬೆಂಗಳೂರು ನಗರದಲ್ಲಿರುವ ರೇಷ್ಮೆ ಇಲಾಖೆಯ ವಿವಿಧ ಕಛೇರಿಗಳಲ್ಲಿ 105 ಅಧಿಕಾರಿ : ಸಿಬ್ಬಂದಿ ವರ್ಗದವರು 5 ರಿಂದ 10 ವರ್ಷಗಳವರೆಗೆ ಮತ್ತು 67 ಅಧಿಕಾರಿ : ಸಿಬ್ಬಂದಿ ವರ್ಗದವರು 10 ರಿಂದ 20 ವರ್ಷಗಳವರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬುದಾಗಿ ಪಟ್ಟಿಯನ್ನು ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆ ಏನೆಂದರೆ ಕೆಲವೊಂದು ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿದ್ದಾಗ್ಯೂ ಅನ್ಯ ಕರ್ತವ್ಯದ ಮೇಲೆ ಪುನಃ ಬೆಂಗಳೂರು ನಗರದಲ್ಲಿರುವ ಕಛೇರಿಗಳಿಗೆ ವಾಪಸ್ಸು ಕರೆಸಿಕೊಂಡಿರುವುದು ನಿಜವೇ ಎಂದು ಕೇಳಿದ್ದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ತಾವು ಪ್ರಶ್ನೆಯನ್ನು ಕೇಳುತ್ತಿದ್ದೀರಿ, ಅದು ಅವರಿಗೂ ಗೊತ್ತಿದೆ, ತಮಗೂ ಗೊತ್ತಿದೆ. ಪುನಃ ಏತಕ್ಕಾಗಿ ತಾವು ಅದನ್ನು ಓದುತ್ತೀರಿ. ಸುಮ್ಮನೆ ಪುನಃ ಅದನ್ನು ರಿಪೀಟ್ ಮಾಡಬೇಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಬಿ. ಬಿ. ಶಿವಪ್ಪ : ಈ ಉತ್ತರವು ಎಷ್ಟು ವಿಚಿತ್ರವಾಗಿದೆ ಎಂದರೆ, ರೇಷ್ಮೆ ಇಲಾಖೆಯಲ್ಲಿ ಅನುಷ್ಠಾನಕ್ಕೆ ತಂದಿರತಕ್ಕಂತಹ ಈ ಪದ್ಧತಿಯನ್ನು ಎಲ್ಲಾ ಇಲಾಖೆಗಳಲ್ಲಿ ತಂದಿದ್ದೇ ಆದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ಉಳಿಯುತ್ತದೆ. ನೀವು ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡತಕ್ಕಂತಹ ಸಂದರ್ಭದಲ್ಲಿ ಅವರಿಗೆ ಕೊಡತಕ್ಕಂತಹ ಟಿ. ಎ. / ಡಿ. ಎ. ಈ ವ್ಯವಸ್ಥೆ ಏನಿದೆ, ಇದೆಲ್ಲವು ಉಳಿಯುತ್ತಿದೆ. ಒಂದೇ ಸ್ಥಳದಲ್ಲಿ 20 ವರ್ಷಗಳಿಂದ

ಕಾರ್ಯನಿರ್ವಹಿಸುವುದಾದರೆ ಈ ಎಲ್ಲಾ ಹಣ ಸರ್ಕಾರಕ್ಕೆ ಉಳಿಯುತ್ತದೆ. ಈ ಪದ್ಧತಿಯನ್ನು ಎಲ್ಲಾ ಇಲಾಖೆಗಳಿಗೂ ತರುವುದಕ್ಕೆ ಸಾಧ್ಯವಿದೆಯೇ? ಅದಕ್ಕೆ ಅವರು ಉತ್ತರದಲ್ಲಿ ಹೇಳುತ್ತಾರೆ, ರೇಷ್ಮೆ ಇಲಾಖೆಯಲ್ಲಿ ಅವರ ಅವಶ್ಯಕತೆ ಇದ್ದು ಸಾರ್ವಜನಿಕರಿಗೆ ಅವರ ಉಪಯೋಗವು ಬೇಕಾಗಿರುವುದರಿಂದ ಅವರನ್ನು ಪುನಃ ಅಲ್ಲಿಯೇ ಇಟ್ಟುಕೊಂಡಿದ್ದೇವೆ. ಅವರು ದಕ್ಷರು ಮತ್ತು ಪ್ರಾಮಾಣಿಕರಾಗಿದ್ದರೆ, ಅದು ಇತರೆ ಇಲಾಖೆಗಳಿಗೂ ಸಿಗಬೇಕಲ್ಲವೇ? ಎಲ್ಲಾ ಇಲಾಖೆಗಳು ಸಹ ಸಾರ್ವಜನಿಕರಿಗಾಗಿ ಕೆಲಸವನ್ನು ಮಾಡುತ್ತಿರುವಂತಹ ಸಂದರ್ಭದಲ್ಲಿ, ಒಂದೇ ಇಲಾಖೆಯಲ್ಲಿ ಅವರು 20 ವರ್ಷಗಳು ಕೆಲಸವನ್ನು ಮಾಡುವುದಾದರೆ ಹೇಗೆ? 20 ವರ್ಷಗಳ ಹಿಂದೆ ಈ ರಾಜ್ಯದಲ್ಲಿ ರೇಷ್ಮೆ ಉತ್ಪನ್ನ, ವಿಸ್ತೀರ್ಣ ಮತ್ತು ರೈತರು ಎಷ್ಟಿದ್ದರೂ ಕೊಡುವುದಕ್ಕೆ ಸಾಧ್ಯವಿದೆಯೇ? ಇಂದು ಬೆಳೆ ಉತ್ಪನ್ನ ರೈತರು ಹಾಗೂ ವಿಸ್ತೀರ್ಣ, 20 ವರ್ಷದಿಂದ ಅದೇ ಅಧಿಕಾರಿಗಳು ಕೆಲಸ ಮಾಡಿದ್ದರಲ್ಲಾ ಅದು ಇಂಪ್ರೂವ್ ಆಗಬೇಕಲ್ಲವೇ? ಈ ಅಧಿಕಾರಿಗಳು ದಕ್ಷರು ಮತ್ತು ಪ್ರಾಮಾಣಿಕರಾಗಿದ್ದಲ್ಲಿ, ಇವರ ಅವಶ್ಯಕತೆ ಬೇರೆ ಇಲಾಖೆಗಳಿಗೆ ಬೇಡವೇ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ತಮಗೆ ಏನು ಆಗಬೇಕು ಮೊದಲು ಅದನ್ನು ಹೇಳಿ. ಎಲ್ಲಾ ಉಪಪ್ರಶ್ನೆಗಳನ್ನು ಒಂದೇ ಸಾರಿ ಕೇಳುವುದಕ್ಕೆ ಆಗುತ್ತದೆಯೇ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ಮಾನ್ಯ ಶಿವಪ್ಪನವರ ಉದ್ದೇಶವೇನೆಂದರೆ, 20 ವರ್ಷಗಳಿಂದ ಅಧಿಕಾರಿಗಳು ಒಂದೇ ಕಡೆ ಇದ್ದರೂ ರೇಷ್ಮೆಯ ಇಂಪ್ರೂವ್‌ಮೆಂಟ್ ಆಗುವ ಬದಲು ಅದರದು ಡಿಕ್ಲೈನ್ ಆಗುತ್ತಿದೆಯಲ್ಲಾ ಎಂದು ಅವರು ಕೇಳುತ್ತಿರುವುದು. ಇದರಿಂದಾಗಿ ಅವರು ಅಷ್ಟೊಂದು ಪ್ರಬಲರಾಗಿದ್ದಾರೆಂದು ಅವರ ಪ್ರಶ್ನೆಯಾಗಿದೆ.

ಶ್ರೀ ಎಂ. ಮಹದೇವ್ : ಸನ್ಮಾನ್ಯ ಅಧ್ಯಕ್ಷರೆ, ರೇಷ್ಮೆ ಇಲಾಖೆ ಬೇರೆ ಇಲಾಖೆಯ ತರಹ ಕಛೇರಿಗಳಲ್ಲಿ ಕೆಲಸ ಮಾಡತಕ್ಕಂತಹ ಇಲಾಖೆಯಲ್ಲಿ. ಇದು ಅಭಿವೃದ್ಧಿಯನ್ನು ಮಾಡತಕ್ಕಂತಹ ಇಲಾಖೆಯಾಗಿದೆ. ರೈತರಿಗೂ ರೇಷ್ಮೆಗೂ ನಿಕಟ ಸಂಬಂಧವಿದೆ, ಕಛೇರಿಗಳಲ್ಲಿ 10-15 ವರ್ಷಗಳ ಕಾಲ ಅಧಿಕಾರಿಗಳು ಯಾರ್ಯಾರು ಈ ರೇಷ್ಮೆಯ ವಿಚಾರದಲ್ಲಿ ಪರಿಣಿತರಾಗಿದ್ದಾರೆ, ರೇಷ್ಮೆ ಅಭಿವೃದ್ಧಿಯ ವಿಚಾರದಲ್ಲಿ ಎಷ್ಟು ಆಸಕ್ತಿಯನ್ನು ಹೊಂದಿದ್ದಾರೆ, ಕಾರ್ಯಕ್ರಮಗಳನ್ನು ಯಾರ್ಯಾರು ನಡೆಸುತ್ತಿದ್ದಾರೆ ಅಂತಹ ಅಧಿಕಾರಿಗಳ ಸೇವೆಯನ್ನು ಜಿಲ್ಲೆಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ. ಮತ್ತೆ ಕೆಲವರು ಒಂದೇ ಕಡೆ 10-15 ವರ್ಷಗಳಿಂದ ಏಕೆ ಇದ್ದಾರೆಂದು ಕೇಳಿದ್ದಾರೆ, 10-15 ವರ್ಷ ಇರತಕ್ಕಂತಹ 4ನೇ ದರ್ಜೆಯ ನೌಕರರು ಇದ್ದಾರೆ, ಪತಿ-ಪತ್ನಿಯರು ಅವರುಗಳು ಬೇರೆ ಬೇರೆ ಕಡೆ ತೊಂದರೆಯಿದ್ದರಿಂದ, ಹೃದಯರೋಗದ ತೊಂದರೆಯಿದ್ದುದರಿಂದ ಮತ್ತು ವೈದ್ಯಕೀಯ ಚಿಕಿತ್ಸೆಯ ತೊಂದರೆಯಿರುವುದರಿಂದ ಅಂತವರುಗಳು ಪಟ್ಟಣ ಪ್ರದೇಶಗಳಲ್ಲಿದ್ದಾರೆ. ಅಂತಹ ನೌಕರರಿಗೆ ರಿಯಾಯಿತಿಯನ್ನು ಕೊಟ್ಟಿದೇವೆ. ಆಡಳಿತದ ದೃಷ್ಟಿಯಿಂದ ನಾವು ಅನೇಕ ಬದಲಾವಣೆಗಳನ್ನು ಮಾಡಿದ್ದೇವೆ, ಅಭಿವೃದ್ಧಿಯ ದೃಷ್ಟಿಯಿಂದ ಕೆಲವು ಅಧಿಕಾರಿಗಳನ್ನು ಇಲ್ಲಿ ಇಟ್ಟುಕೊಂಡಿದ್ದೇವೆ. ರೇಷ್ಮೆ ಇಲಾಖೆಯನ್ನು ಅಭಿವೃದ್ಧಿ ಪಡಿಸಬೇಕೆಂಬ ಒಂದೇ ಒಂದು ಉದ್ದೇಶದಿಂದ ಯಾರು ನುರಿತ ಸೈಂಟಿಸ್ಟ್‌ಗಳಿದ್ದಾರೆ, ಮತ್ತು ಅದರಲ್ಲಿ ಹೆಚ್ಚು ಅನುಭವವಿರುವವರ ಸೇವೆಯನ್ನು ರಾಜ್ಯದಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ಕೇಂದ್ರ ಸ್ಥಾನದಲ್ಲಿ

ನಾವು ಅವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ತಿಳುವಳಿಕೆ ಮಟ್ಟ ಇರತಕ್ಕಂಥ ಅಧಿಕಾರಿಗಳನ್ನು ಎಲ್ಲೋ ಒಂದು ಕಡೆ ಮೂಲೆಯಲ್ಲಿ ಉಪಯೋಗಕ್ಕೆ ಬಾರದಂತೆ ಹಾಕಿದರೆ ಅವರ ಅನುಭವ ಡೆವಲಪ್‌ಮೆಂಟ್ಸ್, ಮತ್ತು ನಮ್ಮಸ್ಕೀಂಗೆ ಅನ್ಯಾಯವಾಗುತ್ತದೆ ಎಂಬ ದೃಷ್ಟಿಯಿಂದ ಕೆಲವರನ್ನು ಒಂದು ಕಡೆ ನಾವು ಇಟ್ಟುಕೊಂಡಿದ್ದೇವೆ. ಆಡಳಿತದ ದೃಷ್ಟಿಯಿಂದ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಬದಲಾಯಿಸುತ್ತೇವೆ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಅವರನ್ನು ಇಟ್ಟುಕೊಂಡಿರುತ್ತೇವೆ, ಮಾನವೀಯತೆಯ ದೃಷ್ಟಿಯಿಂದ ಕೆಲವು ತೀರ್ಮಾನಗಳನ್ನು ಎಲ್ಲಿ ತೆಗೆದುಕೊಳ್ಳಬೇಕಾಗುತ್ತದೆ, ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ನಾನು ಕೇಳಿರುವ ಪ್ರಶ್ನೆಯು ತಮ್ಮ ಟೇಬಲ್‌ನ ಮೇಲೆ ಇದೆ, ಉತ್ತರವು ಕೂಡ ತಮ್ಮ ಟೇಬಲ್‌ನ ಮೇಲಿದೆ. ಬೆಂಗಳೂರು ನಗರದಲ್ಲಿ 5 ವರ್ಷಗಳಿಂದ 10 ವರ್ಷಗಳವರೆಗೆ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು, ಈಗ ಇಡೀ ರಾಜ್ಯದ ಬಗ್ಗೆ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು. ಬೆಂಗಳೂರು ನಗರದಲ್ಲಿ ಯಾರಿದ್ದಾರೆಂದರೆ, ಕಿರಿಯ ಅಭಿಯಂತರರು, ಸಹಾಯಕ ನಿರ್ದೇಶಕರು, ವಿಸ್ತರಣಾ ಅಧಿಕಾರಿಗಳು, ಅಧೀಕ್ಷಕರು ಇವರುಗಳೆಲ್ಲರೂ 10 ರಿಂದ 20 ವರ್ಷಗಳವರೆಗೆ ಬೆಂಗಳೂರು ನಗರದಲ್ಲಿದ್ದಾರೆಂದು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ತಾವು ಅವರ ಹೆಸರನ್ನು ಹೇಳುತ್ತಾ ಹೋದರೆ ನಿಮ್ಮದೆ 15 ನಿಮಿಷ ಪ್ರಶ್ನೆಯಾಗುತ್ತದೆ. ಈ ರೀತಿ ಮಾಡಿದರೆ ನಿಮ್ಮ ಸ್ನೇಹಿತರ ಕೊನೆಯ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ.

ಶ್ರೀ ಬಿ. ಬಿ. ಶಿವಪ್ಪ : ನಾನು ಹೆಸರುಗಳನ್ನು ಹೇಳುತ್ತಾ ಹೋದರೆ ತುಂಬಾ ಉದ್ದವಾಗುತ್ತದೆ. ನಾನು ಯಾರ ಹೆಸರನ್ನು ಹೇಳುತ್ತಿಲ್ಲ, ಯಾವ ಯಾವ ಕೆಟೆಗರಿಯಲ್ಲಿ ಅಧಿಕಾರಿಗಳಿದ್ದಾರೆ ಎಂಬುದನ್ನು ಮಾತ್ರ ಹೇಳಿದೆ. ತಮಗೆ ಇದು ಸಮಂಜಸವೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಹಾಗಲ್ಲ. ನಿಮಗೆ ಏನು ಆಗಬೇಕಾಗಿದೆ ಅದನ್ನು ಕೇಳಿ. ನಿಮಗೆ ಏನು ಬೇಕು ?

(ಗೊಂದಲ)

ಶ್ರೀ ಸಿ. ಭೈರೇಗೌಡ : ಇಲ್ಲಿ ಇರತಕ್ಕಂಥ ಪ್ರಶ್ನೆ ಇಷ್ಟೆ. ಪ್ರತಿದಿವಸ ಲಕ್ಷಾಂತರ ರೂಪಾಯಿಗಳು ಎಲ್ಲಿ ಜೇಬಿಗೆ ಬೀಳುತ್ತದೋ ಅಲ್ಲಿ ಕಳೆದ ಹತ್ತು - ಹದಿನೈದು ವರ್ಷಗಳಿಂದ ಝಂಡ ಹೂಡತಕ್ಕವರು ಅಲ್ಲಿ ಇದ್ದಾರೆ. ಇಲ್ಲಿ ಬರವಣಿಗೆಯಲ್ಲಿ ಕೊಟ್ಟಿರತಕ್ಕದ್ದು ಒಂದು ಉತ್ತರ, ಅವರು ಬಾಯಲ್ಲಿ ಹೇಳುತ್ತಿರತಕ್ಕಂಥಾದ್ದು ಒಂದು ಉತ್ತರ. ಯಾರಾದರೂ ಹೆಂಡತಿ-ಗಂಡ ಒಂದೇ ಇರಬೇಕು. ಇದಲ್ಲ ಇಲ್ಲಿ ಇರತಕ್ಕಂಥ ಪ್ರಶ್ನೆ. ಇಲ್ಲಿ ಇರತಕ್ಕದ್ದು ಸಹಾಯಕ ನಿರ್ದೇಶಕರು ಇದ್ದಾರೆ, ಬೇರೆಯವರು ಇದ್ದಾರೆ. ಸ್ವಲ್ಪ ದಯವಿಟ್ಟು ಪಟ್ಟಿಯನ್ನು ತೆಗೆದು ನೋಡಿ.

ಅಧ್ಯಕ್ಷರು : ಅವರ್ನೆಲ್ಲ ಬೇರೆ ಕಡೆಗೆ ಟ್ರಾನ್ಸಫರ್ ಮಾಡಬೇಕು.

ಶ್ರೀ ಸಿ. ಭೈರೇಗೌಡ : ಈ ಹಣ ಲೂಟಿ ಹೊಡೆಯತಕ್ಕಂಥ ಜನ ಬೆಂಗಳೂರಿನಲ್ಲಿ ಝಂಡ ಹೂಡಿದ್ದಾರೆ ಆ ಝಂಡವನ್ನು ತೆಗೆದು ಬೇರೆ ಕಡೆಗೆ, ರೇಷ್ಮೆ ತೋಟ ಇರುವ ಕಡೆ, ರೇಷ್ಮೆ ಅಭಿವೃದ್ಧಿಯಾಗುತ್ತಿರುವ ಕಡೆಗೆ ಅವರನ್ನು ವರ್ಗಾವಣೆ ಮಾಡತಕ್ಕಂಥ ಕೆಲಸ ತಕ್ಷಣ ನೀವು ಮಾಡುತ್ತೀರಾ.

ಅಧ್ಯಕ್ಷರು : ಹಾಗೆ ಕೇಳಿ.

(ಗೊಂದಲ)

ಶ್ರೀ ಎಂ. ಮಹದೇವ್ : ಅಂತಹ ಪ್ರಕರಣಗಳು ಏನಾದರೂ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ವರ್ಗಾವಣೆ ಮಾಡುತ್ತೇವೆ. ಅಧಿಕಾರಿಗಳನ್ನು ಒಂದೇ ಕಡೆ ಇಟ್ಟುಕೊಳ್ಳುವ ಉದ್ದೇಶ ಏನೂ ಇಲ್ಲ. ಇದರ ಬಗ್ಗೆ ಮುಂದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಆಕಸ್ಮಿಕವಾಗಿ ಬೆಂಗಳೂರು ನಗರದಲ್ಲಿ ಒ. ಒ. ಡಿ. ಯಲ್ಲಿ 26 ಜನ ಸಿಬ್ಬಂದಿಯನ್ನು ತೆಗೆದುಕೊಂಡಿದ್ದೇವೆ. ಇತರೆ ಜಿಲ್ಲೆಗಳಲ್ಲಿ 308 ಸಿಬ್ಬಂದಿಯನ್ನು ಒ. ಒ. ಡಿ. ಮೇಲೆ ತೆಗೆದುಕೊಂಡಿದ್ದೇವೆ. ಒಟ್ಟಾಗಿ ಇಡೀ ರಾಜ್ಯದಲ್ಲಿ 334 ಜನ ಸಿಬ್ಬಂದಿಯನ್ನು ಒ. ಒ. ಡಿ ಮೇಲೆ ತೆಗೆದುಕೊಂಡಿದ್ದೇವೆ. ಅವರು ಸರಿಯಾಗಿ ಕೆಲಸ ನಿರ್ವಹಿಸುವ ಸಲುವಾಗಿ ಮತ್ತು ಅವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಹೀಗೆ ಮಾಡಿದ್ದೇವೆ. ಅವರು ಅಕಸ್ಮಾತ್ ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಅವರನ್ನು ಬೇರೆ ಕಡೆಗೆ ಟ್ರಾನ್ಸಫರ್ ಮಾಡುತ್ತೇವೆ. ಮಾನ್ಯ ಭೈರೇಗೌಡರು ಹೇಳುವ ವಿಚಾರದಲ್ಲಿ.....

ಶ್ರೀ ಸಿ. ಭೈರೇಗೌಡ : ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ.

(ಗೊಂದಲ)

ಅಧ್ಯಕ್ಷರು : ಹೀಗಾದರೆ ಐದು ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಒಂದು ಗಂಟೆಗೆ ನಾನು ಸಭೆಯನ್ನು ಮುಂದೂಡುತ್ತೇನೆ.

ಶ್ರೀ ಎಂ. ಮಹದೇವ್ : ಅಂತಹ ಅಧಿಕಾರಿಗಳು ಯಾರಾದರೂ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ಟ್ರಾನ್ಸಫರ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಅಧಿಕಾರಿಗಳನ್ನು ಎಲ್ಲಿ ಬೇಕಾದರೂ ಇಟ್ಟುಕೊಳ್ಳಲಿ. ನಾವು ಅದರ ಬಗ್ಗೆ ಕೇಳುತ್ತಿಲ್ಲ. ಮಾನ್ಯ ಶಿವಪ್ಪನವರು ಕೇಳಿರತಕ್ಕಂಥ ಪ್ರಶ್ನೆ ಇದು "ಕೆಲವೊಂದು ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಾಗ್ಯೂ ಅನ್ಯ ಕರ್ತವ್ಯದ ಮೇಲೆ ಪುನಃ ಬೆಂಗಳೂರು ನಗರದಲ್ಲಿರುವ ಕಛೇರಿಗಳಿಗೆ ಅವರನ್ನು ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ 'ಹೌದು' ಎನ್ನಬೇಕು ಮತ್ತು ಇಲ್ಲದಿದ್ದರೆ 'ಇಲ್ಲ' ಎನ್ನಬೇಕು" ಆದರೆ ಇಲ್ಲಿ ಉತ್ತರ ಕೊಟ್ಟಿರತಕ್ಕದ್ದು ನೋಡಿದರೆ - ರೇಷ್ಮೆ ಇಲಾಖೆಯ ಅಭಿವೃದ್ಧಿ

ಕಾರ್ಯಗಳ ಯಶಸ್ವಿ ಅನುಷ್ಠಾನ, ಸುಗಮಕಾರಿ ನಿರ್ವಹಣೆ ಹಾಗೂ ಸಾರ್ವಜನಿಕ ಸೇವೆ ಹಿತದೃಷ್ಟಿಯಿಂದ ಅವಶ್ಯಕತೆ ಇರುವ ಪ್ರಕರಣಗಳಲ್ಲಿ ಮಾತ್ರ ಅನ್ಯ ಕಾರ್ಯನಿಮಿತ ವ್ಯವಸ್ಥೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು ಮತ್ತೊಂದು ಉಪ ಪ್ರಶ್ನೆಯನ್ನು ಕೇಳಿಬಿಡುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ ನೀವು ಕೇಳಿಬಿಡಿ. ನಿಮ್ಮದೇ ಕೊನೆಯ ಉಪಪ್ರಶ್ನೆ.

(ಗೊಂದಲ)

ಅಧ್ಯಕ್ಷರು : ಇದೇ ರೀತಿ ಉತ್ತರ ಕೊಡಿ ಎಂದು ನೀವು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಗುರುಸ್ವಾಮಿ : ನನ್ನ ಪ್ರಶ್ನೆ ಇನ್ನೂ ಪೂರ್ತಿಯಾಗಿಲ್ಲ.....

ಶ್ರೀ ಬಿ. ಬಿ. ಶಿವಪ್ಪ : ಕಳೆದ ಐದು ವರ್ಷಗಳಿಂದ ಈಚೆಗೆ ರೇಷ್ಮೆ ಬೆಳೆ ಹೆಚ್ಚಾಗಿದೆಯೋ ಅಥವಾ ಕಡಿಮೆಯಾಗಿದೆಯೋ? ಅದನ್ನು ಹೇಳಿ.

(ಗೊಂದಲ)

ಶ್ರೀ ಎಂ. ಮಹದೇವ್ : ಒಬ್ಬೊಬ್ಬರಾಗಿ ಪ್ರಶ್ನೆ ಕೇಳಿ.

ಶ್ರೀ ಸಿ. ಗುರುಸ್ವಾಮಿ : ಉತ್ತರ ಹೇಳುವುದಕ್ಕೆ ಅವರು ತಡವಡಿಸುತ್ತಿದ್ದಾರೆ.

ಶ್ರೀ ಎಂ. ಮಹದೇವ್ : ನಾನು ಉತ್ತರ ಕೊಡುತ್ತೇನೆ. ನೀವು ಅನುಭವಸ್ಥರು, ಹಿಂದೆ ಮಂತ್ರಿಯಾಗಿದ್ದವರು. ಸ್ವಲ್ಪ ತಾಳ್ಮೆ ವಹಿಸಿದರೆ ಬಹಳ ಒಳ್ಳೆಯದು.

ಶ್ರೀ ಸಿ. ಗುರುಸ್ವಾಮಿ : ನಿಮಗೆ ಉತ್ತರ ಕೊಡುವುದಕ್ಕೆ ಬರದೇ ಇದ್ದರೆ ನಾನೇ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇದ್ದಾರಲ್ಲ.

ಶ್ರೀ ಎಂ. ಮಹದೇವ್ : ನೀವು ಮಹಾ ಮೇಧಾವಿಗಳು ಇದ್ದರೆ ಮತ್ತೆ ಏಕೆ ನನ್ನನ್ನು ಕೇಳುವುದಕ್ಕೆ ಬಂದಿರಿ? ಮೇಧಾವಿಗಳು ಅಲ್ಲದೇ ಇರುವುದಕ್ಕೆ ಅಲ್ಲಿ ನಿಮ್ಮನ್ನು ಜನರು ಕೂಡಿಸಿರುವುದು. ಇತ್ತೀಚೆಗೆ ಕರ್ನಾಟಕದಲ್ಲಿ ರೇಷ್ಮೆ ಉದ್ಯಮ ಬಹಳ ನಶಿಸಿ ಹೋಗುತ್ತಿದೆ. ಕಾರಣ ಏನೆಂದರೆ ಈ ರಾಷ್ಟ್ರದ ಆಮದು ನೀತಿಯಿಂದ. ಈಗ ಅಕ್ಟೋಬರ್ 1998 ರಿಂದ ಈ ಆಮದು ನೀತಿ ಬಂದಿತು.

ಅಧ್ಯಕ್ಷರು : ಈ ರೇಷ್ಮೆ ಬೆಳೆ ಕಡಿಮೆಯಾಗಿದೆಯೇ ಅಥವಾ ಜಾಸ್ತಿಯಾಗಿದೆಯೇ ಎಂದು ಮಾನ್ಯ ಸಚಿವರು ಕೇಳಿದ್ದಾರೆ. ಅದಕ್ಕೆ ಮಂತ್ರಿಗಳು ಕಡಿಮೆ ಆಗಿದೆಯೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ. ಮಹದೇವ್ : ಏಕೆ ಕಡಿಮೆಯಾಗಿದೆ ಎಂದು ಉತ್ತರ ಹೇಳುವುದಕ್ಕೆ ನನಗೆ ಬಿಡಿ. ನೀವು ಮಾನ್ಯ ಸಿಂಧ್ಯಾ ಅವರ ಹತ್ತಿರ ಸ್ವಲ್ಪ ಕಲಿತುಕೊಳ್ಳಿ

ಅಧ್ಯಕ್ಷರು : ನಿಮ್ಮ ಉತ್ತರ ಬ್ರೀಫ್ ಆಗಿರಲಿ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಬ್ರೀಫ್ ಆಗಿ ಉತ್ತರ ಕೊಡುತ್ತಿದ್ದೇನೆ. ಈ ಆಮದು ನೀತಿಯಿಂದ ಇಡೀ ರಾಷ್ಟ್ರದಲ್ಲಿ ಧಕ್ಕೆಯಾಗಿದೆ. ಆದ್ದರಿಂದ ತತ್ಪ್ರಾಪಿ ಕರ್ನಾಟಕ ರಾಜ್ಯದಲ್ಲಿ 61 ಪರ್ಸೆಂಟ್ ತೋಟಗಾರರಿಗೆ ಬಹಳ ತೊಂದರೆಯಾಗಿದೆ. ಆಮದು ನೀತಿ ಬಂದಾಗ ಇದ್ದಂಥ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಬೆಳೆ 1.66 ಲಕ್ಷ ಹೆಕ್ಟೇರ್ ಆಗಿತ್ತು.

ಅಧ್ಯಕ್ಷರು : ತಾವು ಇನ್ನೂ ಬ್ರೀಫ್ ಆಗಿ ಹೇಳಿ ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : 46 ಹೆಕ್ಟೇರ್ ಈ ಆಮದು ನೀತಿ ಬಂದಮೇಲೆ ಸುಮಾರು ಬೆಳೆ ಕಡಿಮೆಯಾಗಿದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, 1996-97 ರಲ್ಲಿ 49,090 ಟನ್ ರೇಷ್ಮೆ ಉತ್ಪಾದನೆಯಾಗಿದೆ. 1997-98 ರಲ್ಲಿ 55,080 ಟನ್ ಉತ್ಪಾದನೆಯಾಗಿದೆ, 1998-99 ರಲ್ಲಿ 56,032 ಟನ್‌ನಷ್ಟು ಉತ್ಪಾದನೆಯಾಗಿದ್ದು, ಇದು ಏರುಪೇರಾಗುತ್ತಿದೆ. ಅವರಿಗೆ ಉತ್ತರ ಹೇಳುವುದಕ್ಕೆ ಬರುತ್ತಿಲ್ಲ. ಅದಕ್ಕೇ ನಾನು ಹೇಳಿದ್ದೇನೆ.

ಶ್ರೀ ಎಂ. ಮಹದೇವ್ : ನಿಮಗೆ ತಾಳ್ಮೆ ಇಲ್ಲ.

ಅಧ್ಯಕ್ಷರು : ಅವರು ಕರೆಕ್ಟ್ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಮಹದೇವ್ : ಸುಮಾರು 46 ಹೆಕ್ಟೇರ್‌ನಲ್ಲಿ ಇಲ್ಲಿಯವರೆಗೆ ಬೆಳೆ ಕಡಿಮೆಯಾಗಿದೆ. ಮತ್ತೆ ಗೂಡಿನ ಉತ್ಪಾದನೆ ಆಮದು ನೀತಿ ಬಂದಾಗ 81 ಸಾವಿರ ಟನ್ ಇತ್ತು. ಅದು 12 ಹೆಕ್ಟೇರ್ ಕಡಿಮೆಯಾಗಿದೆ. ಆಮದು ನೀತಿ ಬರುವುದಕ್ಕೆ ಮುಂಚೆ ಕಚ್ಚಾ ರೇಷ್ಮೆ ಉತ್ಪಾದನೆ 9500 ಟನ್ ಇತ್ತು. ಇದು ಈ 2ನೇ ಸಾವಿರ ವರ್ಷಕ್ಕೆ 1100 ಟನ್‌ನಷ್ಟು ಕಡಿಮೆಯಾಗಿದೆ. ಮತ್ತೆ ಗೂಡಿನ ಧಾರಣೆ ಈ ನೀತಿ ಬರುವುದಕ್ಕೆ ಮುಂಚೆ 108 ರೂಪಾಯಿಗಳ 62 ಪೈಸೆ ಇತ್ತು. ಈಗ ಕಿಲೋಗೆ 2.40 ರೂಪಾಯಿಗಳಷ್ಟು ಕಡಿಮೆಯಾಗಿದೆ. ಕಚ್ಚಾ ರೇಷ್ಮೆ ಧಾರಣೆ ಆಮದು ನೀತಿ ಬರುವುದಕ್ಕೆ ಮುಂಚೆ 1596 ರೂಪಾಯಿಗಳಷ್ಟು ಇತ್ತು. ಅದು ಬಂದನಂತರ 92 ರೂಪಾಯಿಗಳಷ್ಟು ಕಡಿಮೆಯಾಗಿದೆ. ಕಚ್ಚಾರೇಷ್ಮೆ ಆಮದು ನೀತಿ ಬರುವುದಕ್ಕೆ ಮುಂಚೆ 2760 ಇತ್ತು. ಈಗ 2730 ಆಗಿದೆ.

(ಗೊಂದಲ)

ಅಧ್ಯಕ್ಷರು : ಈ ಪ್ರಶ್ನೆ ಇರುವುದು ಅಧಿಕಾರಿಗಳ ವರ್ಗಾವಣೆ ಬಗ್ಗೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಮಾಹಿತಿ ಬೇಕು. ಈ ಆಮದು ನೀತಿಯಿಂದ ಕೆಟ್ಟ ಪರಿಣಾಮವಾಗಿದೆಯೆಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಈ ಕೆಟ್ಟ ಪರಿಣಾಮವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅದನ್ನು ನಿವಾರಣೆ ಮಾಡುವುದಕ್ಕೆ ನೂತನ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಎನ್ನುವ ಒಂದು ಮಾತನ್ನು ಕೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಉತ್ತರ ಹೇಳಿ.

ಶ್ರೀ ಎಂ. ಮಹದೇವ್ : ಮಾನ್ಯ ಸದಸ್ಯರ ಸಲಹೆಯನ್ನು ನಾವು ಪರಿಶೀಲನೆ ಮಾಡುತ್ತೇವೆ.

ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆಗೆ ಅನುಸರಿಸಬೇಕಾದ ನಿಯಮಗಳು

266 (2483) : ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆಗೆ ಅನುಸರಿಸುವ ನಿಯಮಗಳೇನು;

(ಆ) ಅರ್ಜಿದಾರನು ದಾಖಲಾತಿ ಹಾಜರುಪಡಿಸಿದ ನಂತರ ಖಾತೆ ಬದಲಾವಣೆಗೆ ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ. ಎಂ. (ಪೌರಾಡಳಿತ ರಾಜ್ಯ ಸಚಿವರು) :

(ಅ) ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 111 ರನ್ವಯ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆ ಮಾಡಬೇಕಾದ ಸಂದರ್ಭದಲ್ಲಿ ಖಾತೆ ಬದಲಾವಣೆ ಮಾಡಲು ಇಚ್ಛಿಸುವ ಅರ್ಜಿದಾರನು ಸಂಬಂಧಪಟ್ಟ ಆಸ್ತಿಯ ಕ್ರಯ ಪತ್ರ ಮಾಡಿದ 3 ತಿಂಗಳ ಅವಧಿಯೊಳಗಾಗಿ ಪುರಸಭೆ ಮತ್ತು ಪಟ್ಟಣ ಪಂಚಾಯತಿಗೆ ಆ ಕುರಿತು ಎಲ್ಲಾ ವಿವರಗಳೊಂದಿಗೆ ಅರ್ಜಿಯನ್ನು ನೀಡಬೇಕಾಗುತ್ತದೆ. ಆಸ್ತಿಯ ಖಾತೆದಾರರು, ಮರಣ ಹೊಂದಿದ ಸಂದರ್ಭದಲ್ಲಿ ಆಸ್ತಿಯ ವಾರಸುದಾರರು ಮರಣ ಹೊಂದಿದ 6 ತಿಂಗಳ ಅವಧಿಯೊಳಗೆ ಆಸ್ತಿಯ ಹಾಗೂ ಇನ್ನಿತರ ಅಗತ್ಯ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಯನ್ನು ನೀಡಬೇಕಾಗುತ್ತದೆ. ಕರ್ನಾಟಕ ಪುರಸಭೆಗಳ ಕಾಯ್ದೆ 1996ರ ಕಲಂ 112 ರನ್ವಯ ಇಂತಹ ಅರ್ಜಿಯನ್ನು ಸದರಿ ಕಾಯ್ದೆಯ ಷೆಡ್ಯೂಲ್-8 ಅಥವಾ ಷೆಡ್ಯೂಲ್-9 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಕೊಡಬೇಕಾಗುತ್ತದೆ.

(ಆ) ಅರ್ಜಿದಾರನು ಸಂಪೂರ್ಣ ಮಾಹಿತಿಯನ್ನು ಹಾಗೂ ಅಗತ್ಯ ದಾಖಲೆಗಳನ್ನು ನೀಡಿದ್ದಲ್ಲಿ ಕೂಡಲೇ ಖಾತೆ ಬದಲಾವಣೆಯನ್ನು ಮಾಡಲಾಗುವುದು. ಆದರೆ ಅಪೂರ್ಣ ಮಾಹಿತಿ ಹಾಗೂ ದಾಖಲೆಗಳು ಇಲ್ಲದಿದ್ದಲ್ಲಿ ಹಾಗೂ ತಕರಾರುಗಳು ಇದ್ದಲ್ಲಿ ಖಾತೆ ಮಾಡಲು ವಿಳಂಬವಾಗುವುದು.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಮನೆಗಳ ಖಾತೆ ಬದಲಾವಣೆ ಬಗ್ಗೆ ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ 6 ತಿಂಗಳು, 3 ತಿಂಗಳು ಒಳಗಾಗಿ ಖಾತೆಯನ್ನು